"ಮಧುರ ಮಕ್ಕಳೇ - ನಾವು ಸಂಗಮಯುಗದಲ್ಲಿ ಭವಿಷ್ಯದ ಸಂಪಾದನೆಗಾಗಿ ಓದುತ್ತಿದ್ದೇವೆ, ತಂದೆ ನಮಗೆ ಓದಿಸಿ 21 ಜನ್ಮಗಳಿಗೆ ಆಸ್ತಿ ಕೊಡುತ್ತಾರೆ ಎಂದು ತಮಗೆ ನಿಶ್ಚಯವಿದೆ"

ಪ್ರಶ್ನೆ: ತಮ್ಮ ಮೇಲೆ ತಾವು ಕೃಪೆ ಅಥವಾ ಅಶೀರ್ವಾದ ಮಾಡಿಕೊಳ್ಳುವ ವಿಧಿ ಏನಾಗಿದೆ?

ಉತ್ತರ: ತಮ್ಮ ಮೇಲೆ ತಾವೇ ಕೃಪೆ ಅಥವಾ ಅಶೀರ್ವಾದ ಮಾಡಿಕೊಳ್ಳಲು ತಂದೆಯ ಈ ವಿದ್ಯೆಯನ್ನು ಪ್ರತಿ ದಿನ ಅಧ್ಯಯನ ಮಾಡಬೇಕು. ಎಂದಿಗೂ ಈ ವಿದ್ಯೆಯಲ್ಲಿ ತಪ್ಪು ಮಾಡಬಾರದು. ಯಾರು ಸದಾ ಶ್ರೀಮತದಂತೆ ನಡೆಯುತ್ತಾರೆ, ಅವರು ತಮ್ಮ ಮೇಲೆ ತಾವೇ ಕೃಪೆ ಮಾಡಿಕೊಳ್ಳುತ್ತಾರೆ, ಅವರಿಗೆ ತಂದೆಯ ಅಶೀರ್ವಾದ ಸಿಗುತ್ತಿರುತ್ತದೆ.

ಗೀತೆ: ನಾನೊಂದು ಮುಗ್ದ ಮಗುವಾಗಿದ್ದೇನೆ.........

ಓಂ ಶಾಂತಿ. ಶಿವ ಭಗವಾನುವಾಚ: ಯಾವಾಗ ಮನುಷ್ಯರು ಗೀತೆಯನ್ನು ಹೇಳುತ್ತಾರೆ, ಆಗ ಸಾಕಾರ ಕೃಷ್ಣ ಭಗವನುವಾಚ: ಎಂದು ಹೇಳುತ್ತಾರೆ. ಈ ರಾಜಯೋಗ ಹಾಗೂ ಜ್ಞಾನದಿಂದ ನಾನು ನಿಮಗೆ ರಾಜ್ಯಭಾಗ್ಯ ಪ್ರಾಪ್ತಿ ಮಾಡಿಸುತ್ತೇನೆಂದು ತಂದೆ ಬಂದು ತಿಳಿಸಿಕೊಡುತ್ತಾರೆ. ಕೃಷ್ಣನು ಸತ್ಯಯುಗದ ರಾಜಕುಮಾರನಾಗಿದ್ದನು. ಈ ಶರೀರದ ಮೂಲಕ ಶಿವ ತಂದೆ ನಮಗೆ ಓದಿಸುತ್ತಿದ್ದಾರೆಂದು ನೀವು ತಿಳಿದುಕೊಂಡಿದ್ದೀರಿ. ಶಿವ ಜಯಂತಿ ಎಂದು ಗಾಯನವಿದೆ, ಇಲ್ಲಿಯೂ ಸಹ ಜನ್ಮ ದಿನವನ್ನು ಆಚರಿಸಲಾಗುತ್ತದೆ. ತಂದೆಯ ಹೆಸರು ಒಂದೇ ಆಗಿರುತ್ತದೆ, ನಾನು ಗರ್ಭದಿಂದ ಜನ್ಮ ಪಡೆಯುವುದಿಲ್ಲವೆಂದು ತಂದೆಯು ಹೇಳುತ್ತಾರೆ. ನಾನು ಸಾಧಾರಣ ಶರೀರದಲ್ಲಿ ಬರುತ್ತೇನೆಂದು ತಂದೆ ಹೇಳುತ್ತಾರೆ. ಆತ್ಮ ಶರೀರದಲ್ಲಿ ಪ್ರವೇಶ ಮಾಡಿದಾಗ ಒಳಗಡೆ ಚಲನವಲನ ಪ್ರಾರಂಭವಾಗುತ್ತದೆ. ಆಗ ಆತ್ಮ ಪ್ರವೇಶವಾಗಿದೆ ಎಂದು ಗೊತ್ತಾಗುತ್ತದೆ. ಮಕ್ಕಳ ಇಂದ್ರಿಯಗಳ ಚಲನೆ ಆರಂಭವಾಗುತ್ತದೆ. ಈ ಮಾತನ್ನು ಚೆನ್ನಾಗಿ ತಿಳಿದುಕೊಳ್ಳಬೇಕಾಗಿದೆ. ಮತ್ತು ಯಾವ ಮನುಷ್ಯರು ಈ ರೀತಿ ಹೇಳುವುದಿಲ್ಲ..... ನಾವು ಆತ್ಮ ನಿಮಗೆ ತಿಳಿಸಿಕೊಡುತ್ತಿದ್ದೇವೆಂದು. ಅವರು ಶರೀರದಂದಲೇ ಹೆಸರುವಾಸಿಯಾಗಿರುತ್ತಾರೆ. ಈ ತಂದೆ ವಿಚಿತ್ರವಾಗಿದ್ದಾರೆ, ಇವರಿಗೆ ತಮ್ಮ ಶರೀರವಿಲ್ಲ. ಶರೀರಧಾರಿಗಳಿಗೆ ಎಂದೂ ಭಗವಂತ ಎಂದು ಹೇಳಲು ಸಾಧ್ಯವಿಲ್ಲ. ಸ್ಥೂಲ ಅಥವಾ ಸೂಕ್ಷ್ಮ ಯಾವುದೇ ಶರೀರವಿದ್ದರೂ ಸಹ ಅವರಿಗೆ ಪರಮಾತ್ಮನೆಂದು ಹೇಳುವುದಿಲ್ಲ. ಆತ್ಮ ಈ ಇಂದ್ರಿಯಗಳ ಮುಖಾಂತರ ಪರಮಪಿತ ಪರಮಾತ್ಮನನ್ನು ನೆನಪು ಮಾಡುತ್ತದೆ. ಅವರಂತೂ ಮನುಷ್ಯರು ಮಾಡಿರುವ ಶಾಸ್ತ್ರಗಳನ್ನು ಕುಳಿತು ಹೇಳುತ್ತಾರೆ. ಇಲ್ಲಿ ಇದು ಹೊಸ ಮಾತಾಗಿದೆ. ಭಗವಾನುವಾಚ, ಹಾಗಾದರೆ ಭಗವಂತ ಯಾರು? ಅವರನ್ನು ಎಲ್ಲಾ ಭಕ್ತರು ಹೇ ಭಗವಾನ್ ಎಂದು ನೆನಪು ಮಾಡುತ್ತಾರೆ. ಬ್ರಹ್ಮಾ, ವಿಷ್ಣು, ಶಂಕರರ ಹೆಸರನ್ನೂ ಸಹ ತಿಳಿದುಕೊಂಡಿದ್ದಾರೆ. ಹೇ ಬ್ರಹ್ಮಾ, ಹೇ ವಿಷ್ಣು ಎಂದು ಹೇಳುತ್ತಾ ಕೂಗುತ್ತಾರೆ. ಅವರು ದೇವತೆಗಳಾಗಿದ್ದಾರೆ, ಅವರನ್ನು ನೆನಪು ಮಾಡುವುದರಿಂದ ನಿರಾಕಾರನ ನೆನಪು ಬರುತ್ತದೆ. ನಿರಾಕಾರ ಪರಮಾತ್ಮನಿಗೆ ಎಲ್ಲರೂ ಕೈ ಮುಗಿಯುತ್ತಾರೆ. ನಾನೂ ಸಹ ಆತ್ಮ ಆಗಿದ್ದೇನೆ ಎಂದು ತಂದೆಯು ತಿಳಿಸುತ್ತಾರೆ. ನನ್ನ ಚಿತ್ರವನ್ನು ಮಾಡುತ್ತಾರೆ ಹಾಗೂ ನೀವು ಆತ್ಮಗಳ ಚಿತ್ರವನ್ನೂ ಸಹ ಮಾಡುತ್ತಾರೆ, ಮಂದಿರಗಳಲ್ಲಿ ದೊಡ್ಡ-ದೊಡ್ಡ ಶಿವಲಿಂಗವನ್ನು ಇಡುತ್ತಾ, ಜೊತೆಯಲ್ಲಿ ಚಿಕ್ಕ-ಚಿಕ್ಕ ಸಾಲಿಗ್ರಾಮಗಳನ್ನು ಸಹ ಮಾಡುತ್ತಾರೆ, ಇದರಿಂದ ಆತ್ಮಗಳು ಪರಮಾತ್ಮನ ಮಕ್ಕಳಾಗಿದ್ದರೆಂದು ಸಿದ್ದವಾಗುತ್ತದೆ. ಸಮಾನ್ಯವಾಗಿ ತಂದೆಯು ಮಕ್ಕಳಿಗಿಂತ ದೊಡ್ಡವರಾಗಿರುತ್ತಾರೆ, ಆದುದರಿಂದ ಲಿಂಗವನ್ನು ದೊಡ್ಡದಾಗಿ ಮಾಡುತ್ತಾರೆ. ವಾಸ್ತವದಲ್ಲಿ ನಾನೂ ಸಹ ಸಾಲಿಗ್ರಾಮವಾಗಿದ್ದೇನೆ. ಆತ್ಮ ಆಕಾರದಲ್ಲಿ ಚಿಕ್ಕದು-ದೊಡ್ಡದು ಇರುವುದಿಲ್ಲ. ಮನುಷ್ಯರು ಚಿಕ್ಕವರು-ದೊಡ್ಡವರು ಇರುತ್ತಾರೆ, ಆದರೆ ನೀವು ಆತ್ಮ ಹೇಗಿದ್ದೀರಿ, ಅದೇರೀತಿ ನಾನೂ ಇದ್ದೇನೆ ಆದರೆ ನಾನಾತ್ಮ ಶ್ರೇಷ್ಠವಾಗಿದ್ದೇನೆ. ಶ್ರೇಷ್ಠಾತಿ ಶ್ರೇಷ್ಠ ಪರಮಧಾಮದಲ್ಲಿ ಇರುವವನಾಗಿದ್ದೇನೆ. ಪರಮಪಿತ ಪರಮಾತ್ಮ ಮನುಷ್ಯ ಸೃಷ್ಠಿಯ ಬೀಜರೂಪವಾಗಿದ್ದಾರೆ. ಬೀಜವೆಂದು ರಚಯಿತನಿಗೆ ಹೇಳಲಾಗುತ್ತದೆ. ಹೇಗೆ ಬೀಜ ಬಿತ್ತಿದಾಗ ಅದು ವೃಕ್ಷವಾಗುತ್ತದೆ. ಅದೇರೀತಿ ಆತ್ಮನ ರೂಪವನ್ನು ನೋಡಿ ಹೇಗಿದೆ? ವೃಕ್ಷದಂತೆ ಶರೀರವು ವಿಸ್ತಾರವಾಗಿದೆ. ಮೊಟ್ಟ ಮೊದಲನೆಯ ಮಾತಾಗಿದೆ, ಇಲ್ಲಿ ಸ್ವಯಂ ಪರಮಾತ್ಮ ತಂದೆಯೇ ಓದಿಸುತ್ತಾರೆ. ಶ್ರೇಷ್ಠಾತಿ ಶ್ರೇಷ್ಠ ಭಗವಾನುವಾಚ ಎಂದಾಗ ಪರೀಕ್ಷೆಯೂ ಸಹ ಶ್ರೇಷ್ಠಾತಿ ಶ್ರೇಷ್ಠವಾಗಿರುತ್ತದೆ. ಭಗವಂತ ತಿಳಿಸುತ್ತಾರೆ - ನಾನು ನಿಮಗೆ ರಾಜಯೋಗವನ್ನು ಕಲಿಸುತ್ತೇನೆ, ಇದರಿಂದ ಭವಿಷ್ಯ 21 ಜನ್ಮಗಳಿಗೆ ನಿಮ್ಮನ್ನು ದೇವಿ-ದೇವತೆಗಳನ್ನಾಗಿ ಮಾಡುತ್ತೇನೆ, ನಂತರ ಅದರಲ್ಲಿ ನೀವು ಸೂರ್ಯವಂಶದವರಾದರೂ ಆಗಬಹುದು ಅಥವಾ ಚಂದ್ರವಂಶದವರಾದರೂ ಆಗಬಹುದು, ಅನೇಕ ಪದವಿಗಳಿವೆ. ಈಗ ಸಂಪೂರ್ಣ ರಾಜಧಾನಿಯ ಸ್ಥಾಪನೆಯಾಗುತ್ತಿದೆ. ಇದು ಸಂಗಮವಾಗಿದೆ. ನಾನು ಈ ಒಂದು ಜನ್ಮಕ್ಕಾಗಿ ಓದಿಸುವುದಿಲ್ಲವೆಂದು ತಂದೆ ಹೇಳುತ್ತಾರೆ. ಇದು ಭವಿಷ್ಯದ ಸಂಪಾದನೆಯಾಗಿದೆ ಹಾಗೂ ಪ್ರಪಂಚದಲ್ಲಿ ನಡೆಯುವುದೆಲ್ಲಾ ಈ ಒಂದು ಜನ್ಮಕ್ಕೋಸ್ಕರ ಮಾಡುತ್ತಾರೆ. ಭವಿಷ್ಯಕ್ಕೋಸ್ಕರ ಈಗಲೇ ಏಕೆ ಯೋಚನೆಯನ್ನು ಮಾಡಬೇಕು. ನಾವು ಮುಂದಿನ ಜನ್ಮ-ಜನ್ಮಾಂತರದ ಪ್ರಾಪ್ತಿಗಾಗಿ ಓದುತ್ತಿದ್ದೇವೆಂದು ಮಕ್ಕಳಿಗೆ ನಿಶ್ಚಯವಿದೆ. ತಂದೆ ಬರುವಂತಹ 21 ಜನ್ಮಗಳಿಗೆ ಆಸ್ತಿಯನ್ನು ಕೊಡುತ್ತಾರೆಂಬ

ನಿಶ್ಚಯದಿಂದ ಓದುತ್ತಿದ್ದೀರಿ. ನಿಶ್ಚಯವಿಲ್ಲದೆ ಇಲ್ಲಿ ಯಾರೂ ಕುಳಿತುಕೊಳ್ಳಲು ಸಾಧ್ಯವಿಲ್ಲ. ಇಲ್ಲಿ ಸ್ವಯಂ ನಿರಾಕಾರ ಭಗವಂತ ಓದಿಸುತ್ತಿದ್ದಾರೆ ಯಾವುದೇ ಪಂಡಿತ ಮೊದಲಾದವರು ಇದನ್ನು ಓದಿಸಲು ಸಾಧ್ಯವಿಲ್ಲ. ನಮಗೆ ಬೇಹದ್ದಿನ ತಂದೆ ಓದಿಸುತ್ತಿದ್ದಾರೆ, ಅವರಿಗೆ ಯಾವುದೇ ಶರೀರವಿಲ್ಲವೆಂದು ಆತ್ಮನಿಗೆ ಖುಷಿ ಇದೆ. ನಾನು ನಿರಾಕಾರ, ಬ್ರಹ್ಮಾರವರ ತನುವಿನಲ್ಲಿ ಬರುತ್ತೇನೆಂದು ಸ್ವಯಂ ತಂದೆಯೇ ತಿಳಿಸುತ್ತಾರೆ - ಇದು ಅನಾದಿ ಮಾಡಲ್ಪಟ್ಟ ನಾಟಕವಾಗಿದೆ. ನಮಗೆ ಬುದ್ಧಿಯಲ್ಲಿ ಎಲ್ಲವೂ ನೆನಪಿಗೆ ಬರುತ್ತದೆ. ಮೂಲವತನದಲ್ಲಿ ನಾವು ಆತ್ಮಗಳು ಇರುತ್ತೇವೆ. ನಾವಾತ್ಮಗಳು ಪರಮಧಾಮದಲ್ಲಿ ತಂದೆಯ ಜೊತೆಯಲ್ಲಿ ಇರುವವರಾಗಿದ್ದೇವೆ ಎಂದು ಯಾವುದೇ ಮನುಷ್ಯರ ಬುದ್ಧಿಯಲ್ಲಿ ಕುಳಿತುಕೊಳ್ಳುವುದಿಲ್ಲ. ಇದಕ್ಕೇ ಬ್ರಹ್ಮಾಂಡವೆಂದು ಹೇಳುತ್ತಾರೆ. ನಾವು ಆತ್ಮಗಳು ಚಿಕ್ಕ ನಕ್ಷತ್ರಗಳಾಗಿದ್ದೇವೆ. ಪೂಜಿಸುವ ಸಲುವಾಗಿ ಇಷ್ಟು ದೊಡ್ಡದಾಗಿ ಮಾಡಿ ಬಿಟ್ಟಿದ್ದಾರೆ. ಆತ್ಮ ಭೃಕುಟಿಯ ಮಧ್ಯದಲ್ಲಿ ಕುಳಿತುಕೊಳ್ಳಲು ಹೇಗೆ ಸಾಧ್ಯ! ಹೇಳುತ್ತಾರೆ ಭೃಕುಟಿಯ ಮಧ್ಯದಲ್ಲಿ ಹೊಳೆಯುವ ನಕ್ಷತ್ರ....... ನಕ್ಷತ್ರ ಎಷ್ಟು ಚಿಕ್ಕದು. ಇದು ಮಾಡಿ-ಮಾಡಲ್ಪಟ್ಟಂತಹ ಅವಿನಾಶಿ ನಾಟಕವಾಗಿದೆ. ಪ್ರತಿಯೊಬ್ಬರು ತನ್ನ ತನ್ನ ಪಾತ್ರವನ್ನು ಮಾಡುತ್ತಾರೆ ಏಕೆಂದರೆ ಪ್ರತಿಯೊಂದು ಆತ್ಮದಲ್ಲಿ ತಮ್ಮದೇ ಆದ ಅವಿನಾಶಿ ಪಾತ್ರ ನಿಗಧಿಯಾಗಿದೆ. ಈ ಮಾತಿನಲ್ಲಿ ಸ್ವಲ್ಪವೂ ಏರುಪೇರು ಅಗುವುದಿಲ್ಲ. ಹೇಗೆ ಸಿನಿಮಾದಲ್ಲಿ ಒಮ್ಮೆ ಮಾಡಿದ ಪಾತ್ರವೇ ಪುನಃ ಪುನರಾವರ್ತನೆ ಆಗುವಂತೆ, ಇಲ್ಲಿಯೂ ಸಹಾ ಸ್ವಲ್ಪವೂ ಏರು-ಪೇರು ಅಗುವುದಿಲ್ಲ. ಈ ಮಾತುಗಳು ಸಂಪೂರ್ಣ ಹೊಸ ಮಾತುಗಳಾಗಿವೆ. ಇದನ್ನು ಕೋಟಿಯಲ್ಲಿ ಕೆಲವರು ತಿಳಿದುಕೊಳ್ಳುತ್ತಾರೆ. ಸಂಗದೋಷದಲ್ಲಿ ಬಂದು 8-10 ವರ್ಷದವರೂ ಸಹ ವಿದ್ಯೆಯನ್ನು ಬಿಟ್ಟು ಬಿಡುತ್ತಾರೆ. ಬದುಕಿರುವ ತನಕ ಓದುವಂತಹ ವಿದ್ಯೆ ಇದಾಗಿದೆ. ಈ ವಿದ್ಯೆಯನ್ನು ನಾವು ಬರುವ 21 ಜನ್ಮಗಳಿಗಾಗಿ ಓದುತ್ತೇವೆ. ನಮಗೆ ಭಗವಂತನೇ ಓದಿಸುತ್ತಿದ್ದಾರೆಂಬ ನಶೆ ಇರಬೇಕು. ಯಾರಾದರೂ ರಾಜನ ಮಗನಾಗಿದ್ದು ಅವರಿಗೆ ರಾಜನೇ ಕುಳಿತು ಓದಿಸುವುದಾದರೆ..... ನಮ್ಮ ತಂದೆ ಮಹಾರಾಜ ನಮಗೆ ಓದಿಸುತ್ತಾರೆಂದು ನಶೆಯಿಂದ ಹೇಳುತ್ತಾರೆ. ಪತಿತ ಪಾವನ ತಂದೆ ನಮಗೆ ಇಲ್ಲಿ ಓದಿಸುತ್ತಾರೆ. ರಾಜಯೋಗವನ್ನು ತಿಳಿಸಿಕೊಡುತ್ತಾರೆ. ನಾವು ಈಶ್ವರೀಯ ವಿದ್ಯಾರ್ಥಿಗಳಾಗಿದ್ದೇವೆ, ಗಾಡ್ ಫಾದರ್ ಪರಮಪಿತ ಪರಮಾತ್ಮನಿಂದ ಸ್ವರ್ಗದ ಆಸ್ತಿಯನ್ನು ತೆಗೆದುಕೊಳ್ಳುತ್ತಿದ್ದೇವೆಂದು ಒಳಗೆ ಬಹಳ ಖುಷಿಯಿರಬೇಕು. ಎಷ್ಟು ಸಹಜ ವಿದ್ಯೆ ಇದಾಗಿದೆ, ಆದರೆ ಈ ವಿದ್ಯೆಯಲ್ಲಿ ಮಾಯೆ ಬಹಳ ವಿಘ್ನಗಳನ್ನು ತರುತ್ತದೆ. ನಡೆಯುತ್ತಾ-ನಡೆಯುತ್ತಾ ಈ ವಿದ್ಯೆಯನ್ನು ಬಿಟ್ಟು ಬಿಡುತ್ತಾರೆ. ಈ ಆತ್ಮಿಕ ವಿದ್ಯೆಯನ್ನು ಪ್ರತೀದಿನವೂ ಓದಬೇಕು, ಇದಕ್ಕಾಗಿಯೇ ಟೇಪನ್ನು ಸಹ ಇಟ್ಟಿದ್ದಾರೆ. ಮನುಷ್ಯರು ಓದುವ ಸಲುವಾಗಿ ಅಮೇರಿಕಾ, ಲಂಡನ್ನಗಳಿಗೆ ಹೋಗುತ್ತಾರೆ. ಇಲ್ಲಿ ಮನೆಯಲ್ಲಿ ಇರುವವರೇ ಪೂರ್ಣ ಓದುವುದಿಲ್ಲ. ಪರಮಾತ್ಮ ನಮಗೆ ರಾಜಯೋಗವನ್ನು ಕಲಿಸಿ ಕೊಡುತ್ತಾರೆಂದು ಯಾರೂ ತಿಳಿದುಕೊಂಡಿಲ್ಲ. ಭಗವಂತ ಯಾರು ತ್ರಿಲೋಕಿನಾಥ, ವರ್ಲ್ಡ್ ಆಲ್ಮೈಟಿ, ಲಿಬರೇಟರ್, ಮಾರ್ಗದರ್ಶಿಯಾಗಿದ್ದಾರೆ ನೋಡಿ ಅವರ ಮಹಿಮೆ ಎಷ್ಟೊಂದು ಇದೆ! ಆದರೆ ತಂದೆಯನ್ನು ನಮ್ಮಲ್ಲಿಯೂ ಕೆಲವರು ಮಾತ್ರ ತಿಳಿದುಕೊಂಡಿದ್ದೇವೆ.

ಈ ಸಮಯದಲ್ಲಿ ನೀವು ಗುಪ್ತವಾಗಿದ್ದೀರಿ. ನಾವು ಮೂಲವತನ ನಿವಾಸಿಗಳು ಆಗಿದ್ದೇವೆ ಎಂದು ನಿಮಗೆ ತಿಳಿದಿದೆ. ನಂತರ ಸೂಕ್ಷ್ಮವತನವೂ ಇದೆ. ಆ ಸೂಕ್ಷ್ಮವತನಕ್ಕೆ ಮಕ್ಕಳು ಹೋಗುತ್ತಾರೆ. ಮನುಷ್ಯರು ಸಾಕ್ಷಾತ್ಕಾರದಲ್ಲಿ ನೋಡುತ್ತಾರೆ ಆದರೆ ನೀವು ಮಕ್ಕಳು ಪ್ರತ್ಯಕ್ಷದಲ್ಲಿ ಹೋಗುತ್ತೀರಿ. ಸೂಕ್ಷ್ಮವತನದಲ್ಲಿ ನೀವು ಬ್ರಾಹ್ಮಣರ ಹಾಗೂ ದೇವತೆಗಳ ಮಿಲನವಾಗುತ್ತದೆ. ಅದು ಬ್ರಾಹ್ಮಣ ಹಾಗೂ ದೇವತೆಗಳ ಮಿಲನವಾಗಿದೆ, ಇದು ಬ್ರಾಹ್ಮಣರ ಹಾಗೂ ಕ್ಷತ್ರಿಯರ ಸಂಗಮ. ಸೂಕ್ಷ್ಮವತನಕ್ಕೆ ಭೋಗವನ್ನು ತೆಗೆದುಕೊಂಡು ಹೋಗುತ್ತೀರಿ, ಇದೆಲ್ಲವೂ ಅಂತ್ಯದಲ್ಲಿ ಸಾಕ್ಷಾತ್ಕಾರವಾಗುತ್ತದೆ. ಹೇಗೆ ಕನ್ಯೆಯರು ತವರು ಮನೆಯಿಂದ ಅತ್ತೆಯ ಮನೆಗೆ ಹೊರಡುವಾಗ ಬಹಳ ವಿಜೃಂಭಣೆಯಿಂದ ವಾದ್ಯಗಳನ್ನು ಬಾರಿಸುತ್ತಾರೆ, ಹೀಗೆ ಅಂತ್ಯದಲ್ಲಿ ಪ್ರಪಂಚದವರಿಗೆ ಸಾಕ್ಷಾತ್ಕಾರವಾಗುತ್ತದೆ. ಆರಂಭದಲ್ಲಿ ನೀವು ಬಹಳ ನೋಡಿದ್ದೀರಿ, ಹಾಗೆಯೇ ಅಂತ್ಯದಲ್ಲೂ ಸಹ ಬಹಳ ನೋಡುತ್ತೀರಿ. ನಿರಂತರ ಓದುತ್ತಿದ್ದರಷ್ಟೆ ಸಾಕ್ಷಾತ್ಕಾರವನ್ನು ನೋಡಲು ಸಾಧ್ಯ. ಒಂದುವೇಳೆ ಯಾರಿಗಾದರೂ ಕರ್ಮ ಬಂಧನವಿಲ್ಲವೆಂದರೆ ವಿದ್ಯೆಯ ಕಡೆ ಪೂರ್ಣ ಗಮನ ಕೊಡಬೇಕು. ಬಂಧನವನ್ನು ಹಾಕುವವರು ಯಾರಾದರೂ ಮರಣ ಹೊಂದಿದರೆ ಆಗ ಚೆನ್ನಾಗಿ ವಿದ್ಯಾಭ್ಯಾಸ ಮಾಡಬಹುದು ಏಕೆಂದರೆ ಬಂಧನದಿಂದ ಮುಕ್ತರಾದರು. ಈಗ ಚೆನ್ನಾಗಿ ಪುರುಷಾರ್ಥವನ್ನು ಮಾಡಿ. ಈ ಜ್ಞಾನ ಬಹಳ ಅದ್ಭುತವಾಗಿದೆ. ತಂದೆ ಕುಳಿತು ಮಕ್ಕಳಿಗೆ ತಿಳಿಸಿಕೊಡುತ್ತಾರೆ-ಮಕ್ಕಳೇ ಈಗ ಹುಡುಗಾಟಿಕೆಯನ್ನು ಮಾಡ ಬೇಡಿ. ಮಾಯೆ ನಿಮ್ಮ ದೀಪವನ್ನು ತಕ್ಷಣ ಹಾರಿಸಿ ಬಿಡುತ್ತದೆ, ತಂದೆಯನ್ನು ಚೆನ್ನಾಗಿ ನೆನಪು ಮಾಡಬೇಕು ಹಾಗು ಓದಬೇಕು. ತಂದೆಯ ಸಮ್ಮುಖದಲ್ಲಿ ಕುಳಿತು ಡೈರೆಕ್ಟ್ ಕೇಳುವುದರಿಂದ ನಶೆಯೇರುತ್ತದೆ. ಹೊರಗೆ ನಡೆದರೆ ಆ ನಶೆ ಮಾಯವಾಗುತ್ತದೆ. ಎಂತಹ ಸಂಗ ಅಂತಹ ರಂಗು ಬರುತ್ತದೆ. ಬಂಧನವಿಲ್ಲವೆಂದರೆ ಕುಳಿತು ಓದಿ ಹಾಗು ಓದಿಸಿ.

ಚಿತ್ರಗಳನ್ನು ಬಹಳ ಚೆನ್ನಾಗಿ ಮಾಡಲಾಗಿದೆ. ತಂದೆಯು ಯುಕ್ತಿಗಳನ್ನು ರಚನೆ ಮಾಡುತ್ತಿದ್ದಾರೆ. ಹಳ್ಳಿಯವರು ಹೇಗೆ ಕಲಿಯುತ್ತಾರೆ! ಅನ್ಯರು ಸ್ಲೈಡ್ನಿಂದ ಸಹ ಕಲೆಯುತ್ತಾರೆ. ದಿನ-ಪ್ರತಿದಿನ ಉನ್ನತಿಯನ್ನು ಹೊಂದುತ್ತಲೇ ಇರುತ್ತಾರೆ. ನಿಮ್ಮ ಬುದ್ಧಿಯಲ್ಲಿ ಇಡೀದಿನ ಸ್ವದರ್ಶನ ಚಕ್ರ ತಿರುಗುತ್ತಾ ಇರಬೇಕು. ಬುದ್ಧಿಯಲ್ಲಿ ಜ್ಞಾನವಿದ್ದಾಗ ಅನ್ಯರಿಗೆ ತಿಳಿಸಿಕೊಡುತ್ತೀರಿ, ಇಲ್ಲವೆಂದರೆ ಶಿಕ್ಷಕರು ಇವರಿಗೆ ವಿದ್ಯೆಯ ಕಡೆ ಗಮನವಿಲ್ಲವೆಂದು ತಿಳಿದುಕೊಳ್ಳುತ್ತಾರೆ. ದೇಹಾಭಿಮಾನ ಬಹಳ ಇದೆ. ಮಿತ್ರ-ಸಂಬಂಧಿ, ಶರೀರದ ಮುಂತಾದುವುಗಳು ನೆನಪು ಇರುತ್ತದೆ. ಆಗ ಧಾರಣೆ ಆಗುವುದಿಲ್ಲ. ಇಂತಹವರಿಗೆ ಅದೃಷ್ಟದಲ್ಲಿ

ಇಲ್ಲವೆಂದು ನಾವು ಹೇಳುತ್ತೇವೆ. ಎಷ್ಟೇ ಹೇಳಿದರೂ ಶ್ರೀಮತದಂದೆ ನಡೆಯುವುದಿಲ್ಲ. ಮಕ್ಕಳು ಕೇಳುತ್ತಾರೆ ಬಾಬಾ ನನಗೆ ಏನು ಆಗುತ್ತಾ ಇದೆ? ತಂದೆ ತಿಳಿಸುತ್ತಾರೆ- ನೀವು ಸರಿಯಾಗಿ ಓದುತ್ತಿಲ್ಲ, ಇದರಲ್ಲಿ ಆಶೀರ್ವಾದದ ಮಾತೇ ಇಲ್ಲ. ನಾವು ಓದಿಸುತ್ತೇವೆ ನೀವು ಓದುವಂತಹ ಕೃಪೆಯನ್ನು ತಮ್ಮ ಮೇಲೆ ಮಾಡಿಕೊಳ್ಳಿ. ಶ್ರೀಮತದಂತೆ ನಡೆಯುವುದೇ-ಕೃಪೆಯಾಗಿದೆ. ಶ್ರೀಮತದಂತೆ ನಡೆಯುತ್ತಿಲ್ಲವೆಂದರೆ ತಮ್ಮ ಮೇಲೆ ಕೃಪೆ ಮಾಡಿ ಶ್ರಾಪಿತರಾಗುವುದಾಗಿದೆ. ತಂದೆಯಿಂದ ಆಸ್ತಿಯನ್ನು ಪಡೆಯದೇ ರಾವಣನ ಮತದಂತೆ ನಡೆದು ಶ್ರಾಪಿತರಾಗುತ್ತಾರೆ. ತಂದೆಯಂತೂ ಆಸ್ತಿಯನ್ನು ಕೊಡಲು ಬಂದಿದ್ದಾರೆ. ಚಿರಂಜೀವಿ ಭವ ಎಂದು ಅಶೀರ್ವಾದ ಮಾಡುತ್ತಾರೆ. ಸದಾ ಜೀವಂತವಾಗಿರಿ ಅರ್ಥಾತ್ ಸ್ವರ್ಗವಾಸೀ ಭವ, ಸ್ವರ್ಗಕ್ಕೆ ಅಮರಪುರಿ ಎಂದು ಕರೆಯಲಾಗುತ್ತದೆ. ಅಮರನಾಥನೇ ಇಂತಹ ಅಶೀರ್ವಾದ ಮಾಡುತ್ತಾರೆ. ಅಮರಪುರಿಯ ದೇವತೆಗಳು ಪವಿತ್ರರಾಗಿದ್ದರಲ್ಲವೇ, ಹದ್ದಿನ ಸಂಬಂಧದ ಮೇಲಿನ ಮೋಹವನ್ನು ತ್ಯಾಗ ಮಾಡಲೇಬೇಕು. ಈಗ ತಂದೆಯ ಬಳಿ ಮರಳಿ ಹೋಗಬೇಕಾಗಿದೆ. ದೇಹದ ಮೇಲಿನ ಮೋಹದಿಂದ ನಿಮಗೆ ಇಲ್ಲಿಯದೇ ನೆನಪು ಇರುತ್ತದೆಂದು ತಂದೆ ತಿಳಿಸುತ್ತಾರೆ. ಆದ್ದರಿಂದ ದೇಹೀ-ಅಭಿಮಾನಿಗಳಾದಾಗ ಅಂತ್ಯದಲ್ಲಿ ನಿಮಗೆ ಮುಕ್ತಿಧಾಮ ಜೊತೆಗೆ ಸುಖಧಾಮದ ನೆನಪು ಬರುತ್ತದೆ. ಶಾಂತಿಧಾಮ ಮತ್ತು ಸುಖಧಾಮ, ಇದಾಗಿದೆ ದುಃಖಧಾಮ. ಆದಿ-ಮಧ್ಯ-ಅಂತ್ಯ, ಹೊಸ ಪ್ರಪಂಚ, ಮಧ್ಯದ ಪ್ರಪಂಚ ಮತ್ತು ಹಳೆಯ ಪ್ರಪಂಚ. ಯಾವಾಗ ಅರ್ಧ ಸಮಯ ಪೂರ್ಣವಾಗುತ್ತದೆ ನಂತರ ಹಳೆಯ ಪ್ರಪಂಚದ ಹೆಸರು ಪ್ರಾರಂಭವಾಗುತ್ತದೆ. ಈ ಹಳೆಯ ಪ್ರಪಂಚ ಈಗ ಹೊಸದಾಗಲಿದೆ ಮತ್ತೆ ಹೇಗೆ ಹೊಸದಾಗುತ್ತದೆ ಅದನ್ನು ಬಂದು ನೋಡಿ, ತಿಳಿಯಿರಿ ಆದರೆ ಕೋಟಿಯಲ್ಲಿ ಕೆಲವರು ಗಮನಕೊಟ್ಟು ಕೇಳುತ್ತಾರೆ. ಸಾವಿರಾರು ಲಕ್ಷಾಂತರ ಮಂದಿ ಬರುತ್ತಾರೆ. ಅವರಲ್ಲಿ 2-4 ಜನರು ಹುಟ್ಟಿಕೊಳ್ಳುತ್ತಾರೆ. ನಂತರವೂ ಸಹ ಬಲಹೀನರಾಗುತ್ತಾರೆ. ಒಂದು ಪ್ರದರ್ಶನದಲ್ಲಿ 2-4 ಜನರೂ ಸಹ ಉಳಿದರೆ ಅದೇ ಸೌಭಾಗ್ಯ. ದಿನ-ಪ್ರತಿದಿನ ಪ್ರದರ್ಶನವೂ ಸಹ ವೃದ್ಧಿಯಾಗುತ್ತದೆ. ನಡೆಯುತ್ತಾ-ನಡೆಯುತ್ತಾ ಮುಂದೆ ನಿತ್ಯವೂ 10,000 ಮಕ್ಕಳು ಬರುತ್ತಾರೆ. ದೊಡ್ಡ-ದೊಡ್ಡ ಚಿತ್ರಗಳೂ ಸಹ ಇರುತ್ತದೆ. ತಿಳಿಸಿಕೊಡುವವರೂ ಸಹ ಬುದ್ಧಿವಂತರು ಇರುತ್ತಾರೆ. ಅಂತ್ಯದಲ್ಲಿ ಮಹಿಮೆಯಂತು ಮಾಡುತ್ತಾರೆ. ಹೇ ಪ್ರಭು, ಪತಿತ ಪ್ರಪಂಚವನ್ನು ಪಾವನವನ್ನಾಗಿ ಮಾಡುವ ವಿಧಾನ ಎಲ್ಲಕ್ಕಿಂತ ಭಿನ್ನವಾದುದಾಗಿದೆ ಎಂದು ಹೇಳುತ್ತಾರೆ. ಭಕ್ತಿಯ ಅಭ್ಯಾಸ ಬಹಳಷ್ಟಿದೆ. ದಿವಾಳಿಯಾದರೆ ಅಥವಾ ಯಾರಾದರು ಸತ್ತರೆ ಗುರು ಜನರು ಹೇಳುತ್ತಾರೆ ನೋಡಿದಿರಾ – ಭಕ್ತಿ ಮಾಡುವುದನ್ನು ಬಿಟ್ಟಿದ್ದಕ್ಕೆ ಈ ರೀತಿಯಾಯಿತು. ಮಾಯೆಯ ವಿಘ್ನ ಬರುತ್ತದೆ ಆದರೂ ಶ್ರೀಮತವನ್ನು ಬಿಡಬಾರದು. ಮಾಯೆ ದೊಡ್ಡ ಮೋಹಿನಿಯಾಗಿದೆ, ಎಷ್ಟೊಂದು ಆಕರ್ಷಣೆ ಮಾಡುತ್ತದೆ, ನಮ್ಮ ಪಾಲಿಗೆ ಇದೇ ಸ್ವರ್ಗವೆಂದು ತಿಳಿಯುತ್ತಾರೆ. ಮಾಯೆಯ ಆಡಂಬರದಿಂದ ರಾವಣ ರಾಜ್ಯದ ಅವನತಿ ಆಗಲಿದೆ. ವಿಜ್ಞಾನದ ಕಾರಣ ಮಾಯೆಯ ಆಡಂಬರ ಹೆಚ್ಚಾಗಿದೆ, ಗಾಂಧಿ ಸ್ವರ್ಗವನ್ನಾಗಿ ಮಾಡಿದರೆಂದು ತಿಳಿದಿದ್ದಾರೆ. ನಿಮಗೆ ಈಗ ಸ್ವರ್ಗದ ಜ್ಞಾನ ಸಿಕ್ಕಿದೆ, ಆದ್ದರಿಂದ ಇದು ನರಕವೆಂದು ತಿಳಿದುಕೊಂಡಿದ್ದೀರಿ. ಈ ರಾಜ್ಯ ಮೃಗತೃಷ್ಣ ಸಮಾನವಾಗಿದೆ. (ದುರ್ಯೋಧನನ ಉದಾಹರಣೆ) ಈ ರಾಜ್ಯ ಹೋಗಿಯೇ ಹೋಗುವುದು. ಕಲ್ಪ-ಕಲ್ಪದ ಮಾತಾಗಿದೆ. ಕಲ್ಪ-ಕಲ್ಪ ಹೊಸ ಜಗತ್ತು ಆಗುತ್ತಿರುತ್ತದೆ ಮತ್ತು ಹಳೆಯ ಜಗತ್ತು ಸಮಾಪ್ತಿಯಾಗುತ್ತದೆ. ತ್ರಿಮೂರ್ತಿ ಶಿವನೂ ಸಹ ಇದ್ದಾರೆ. ಬ್ರಹ್ಮಾರ ಮುಖಾಂತರ ಸ್ಥಾಪನೆಯನ್ನು ಮಾಡುತ್ತಿದ್ದಾರೆ. ಶಂಕರನ ಮುಖಾಂತರ ವಿನಾಶವನ್ನು ಮಾಡುತ್ತಾರೆ ನಂತರ ಯಾರು ರಾಜಯೋಗ ಕಲಿಯುತ್ತಾರೆ ಅವರೇ ರಾಜ್ಯವನ್ನು ಆಳುತ್ತಾರೆ. ದೈವೀ ರಾಜ್ಯವನ್ನು ಸ್ಥಾಪನೆ ಮಾಡಿ ಅದನ್ನು ಜನ್ಮ-ಜನ್ಮಾಂತರ ಪಾಲನೆಯನ್ನು ಮಾಡುತ್ತಾರೆ. ಇದನ್ನು ಬುದ್ಧಿಯಲ್ಲಿ ಧಾರಣೆ ಮಾಡಿ ನಂತರ ಸೇವೆ ಮಾಡಿ. ಸತ್ಯ ಗೀತೆಯ ಪ್ರವಚಕರು ನೀವಾಗಿದ್ದೀರಿ. ಕೇಳುವುದು-ಹೇಳುವುದು, ಮುಳ್ಳನ್ನು ಹೂವನ್ನಾಗಿ ಮಾಡುವುದು. ನೀವು ಅರ್ಧಕಲ್ಪಕ್ಕೆ ದುಃಖದಿಂದ ಮುಕ್ತರಾಗುತ್ತೀರಿ. ಹೇಗೆ ಭಾನುವಾರದ ದಿನ ಎಲ್ಲರಿಗೂ ರಜಾ ಇರುತ್ತದೆ. ಹಾಗೆಯೇ ಅರ್ಧಕಲ್ಪ ನೀವು ದುಃಖದಿಂದ, ಅಳುವುದರಿಂದ ಬಿಡುಗಡೆಯಾಗುತ್ತೀರಿ. ಒಳ್ಳೆಯದು.

ಮಧುರಾತಿ ಮಧುರ ಅಗಲಿ ಹೋಗಿ ಮರಳಿ ಸಿಕ್ಕಿರುವ ಮಕ್ಕಳ ಪ್ರತಿ ಮಾತಾಪಿತಾ ಬಾಪ್ದಾದಾರವರ ನೆನಪು, ಪ್ರೀತಿ ಹಾಗೂ ಸುಪ್ರಭಾತ. ಆತ್ಮಿಕ ಮಕ್ಕಳಿಗೆ ಆತ್ಮಿಕ ತಂದೆಯ ನಮಸ್ತೆ.

ಧಾರಣೆಗಾಗಿ ಮುಖ್ಯಸಾರ:

1. ಕರ್ಮ ಬಂಧನದಿಂದ ಮುಕ್ತರಾಗಿ ಆತ್ಮೀಯ ವಿದ್ಯೆಯನ್ನು ನಿತ್ಯವೂ ಓದಬೇಕು. ಎಲ್ಲಿಯವರೆಗೂ ಜೀವಿಸಿರುತ್ತೇವೆ, ಅಲ್ಲಿಯವರೆಗೆ ವಿದ್ಯೆಯನ್ನು ಓದಲೇಬೇಕು.

2. ಹದ್ದಿನ ಕರ್ಮ ಬಂಧನ ಅಥವಾ ದೇಹದಿಂದ ಮೋಹದ ತ್ಯಾಗವನ್ನು ಮಾಡಿ ತಮ್ಮ ಶಾಂತಿಧಾಮ ಮತ್ತು ಸುಖಧಾಮದ ನೆನಪು ಮಾಡಬೇಕು. ಸಂಗ ದೋಷದಿಂದ ತನ್ನನ್ನು ಸಂಭಾಲನೆ ಮಾಡಿಕೊಳ್ಳಬೇಕು.

ವರದಾನ: ಮನಸ್ಸು-ಬುದ್ಧಿ-ಸಂಸ್ಕಾರ ಅಥವಾ ಸರ್ವ ಕರ್ಮೇಂದ್ರಿಯಗಳನ್ನು ನೀತಿಯನುಸಾರ ನಡೆಸುವಂತಹ ಸ್ವರಾಜ್ಯ ಅಧಿಕಾರಿ ಭವ.

ಸ್ವರಾಜ್ಯ ಅಧಿಕಾರಿ ಆತ್ಮರು ಪ್ರತಿಯೊಂದು ಕರ್ಮೇಂದ್ರಿಯಗಳನ್ನು ತನ್ನ ಯೋಗದ ಶಕ್ತಿಯ ಮೂಲಕ

ಆದೇಶದನುಸಾರ ನಡೆಸುತ್ತಾರೆ. ಕೇವಲ ಈ ಸ್ಥೂಲ ಕರ್ಮೇಂದ್ರಿಯಗಳನ್ನಷ್ಟೇ ಅಲ್ಲ ಆದರೆ ಮನಸ್ಸು-ಬುದ್ಧಿ-ಸಂಸ್ಕಾರವೂ ಸಹ ರಾಜ್ಯಾಧಿಕಾರಿಯ ಆದೇಶದನುಸಾರ ಅಥವಾ ನೀತಿಯನುಸಾರ ನಡೆಸುತ್ತಾರೆ. ಅವರೆಂದಿಗೂ ಸಹ ಸಂಸ್ಕಾರಗಳಲ್ಲಿ ಸಿಲುಕುವುದಿಲ್ಲ ಆದರೆ ಸಂಸ್ಕಾರವನ್ನು ತನ್ನ ವಶದಲ್ಲಿಟ್ಟುಕೊಂಡು ಶ್ರೇಷ್ಠ ನೀತಿಯಿಂದ ಕಾರ್ಯದಲ್ಲಿ ತೊಡಗಿಸುತ್ತಾರೆ, ಶ್ರೇಷ್ಠ ಸಂಸ್ಕಾರದನುಸಾರ ಸಂಬಂಧ-ಸಂಪರ್ಕದಲ್ಲಿ ಬರುತ್ತಾರೆ. ಸ್ವರಾಜ್ಯ ಅಧಿಕಾರಿ ಆತ್ಮನಿಗೆ ಸ್ವಪ್ನದಲ್ಲಿಯೂ ಮೋಸವಾಗಲು ಸಾಧ್ಯವಿಲ್ಲ.

**ಸ್ಲೋಗನ್:** ನಿರ್ಮಾಣತೆಯ ವಿಶೇಷತೆಯನ್ನು ಧಾರಣೆ ಮಾಡಿಕೊಳ್ಳುತ್ತೀರೆಂದರೆ ಸಫಲತೆಯು ಸಿಗುತ್ತಿರುತ್ತದೆ.